# ಕರ್ನಾಟಕ ಸರ್ಕಾರ

ಸಂಖ್ಯೆ: ಆಸಾನಿ/15/ಆಡಳಿತ-1/2018-19
2508-517

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 30.04.2018.

ವಿಷಯ: ಸಿವಿಲ್ ಅಪೀಲು ಸಂಖ್ಯೆ: 2368/2011-ಬಿ.ಕೆ. ಪವಿತ್ರ ಮತ್ತು ಇತರರು ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ:
1. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ: 2368/2011 – ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ದಿನಾಂಕ: 09.02.2017.
2. ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್/182/ಎಸ್‌ಆರ್‌ಆರ್/ 2011, ಬೆಂಗಳೂರು, ದಿನಾಂಕ 06.05.2017.
3. ಈ ನಿರ್ದೇಶನಾಲಯದ ಅಧಿಕೃತ ಜ್ಞಾಪನ ಸಂಖ್ಯೆ : ಆಸಾಂನಿ/ 60/ ಡಳಿತ-1/2017-18, ದಿನಾಂಕ 30.04.2018.
4. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/639/ಸೇನೆನಿ/2017, ದಿನಾಂಕ 27.03.2018.
5. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/639/ಸೇನೆನಿ/2017, ದಿನಾಂಕ 04.04.2018.
6. ಸರ್ಕಾರದ ಸುತ್ತೋಲೆ ಸಂಖ್ಯೆ: ಮುಕಾ/500/2018, ದಿನಾಂಕ 13.04.2018.
7. U.O Note of Personal Secretary to Chief Secretary to Government (Cabinet Affairs) No. CS/53/ SCM/2018, dated 16.04.2018.

><><><

**ಪಸ್ತಾವನೆ:**

ಮಾನ್ಯ ಸರ್ವೋಚ್ಚ ನ್ಯಾಯಲಯವು ಸಿವಿಲ್ ಅಪೀಲು ಸಂಖ್ಯೆ: 2368/2011 ಬಿ,ಕೆ ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ದಿನಾಂಕ: 09.02.2017ರಂದು ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಸಂಬಂಧ ರಾಜ್ಯ ಸಿವಿಲ್ ಸೇವೆಗಳಲ್ಲಿನ ವಿವಿಧ ವೃಂದದ ಜೇಷ್ಠತಾ ಪಟ್ಟಿಗಳನ್ನು ದಿನಾಂಕ 27.04.1978 ರಿಂದ ಪರಿಷ್ಕರಿಸುವುದಕ್ಕೆ ಸಂಬಂಧಿಸಿದಂತೆ ಉಲ್ಲೇಖ (2)ರ ಸರ್ಕಾರದ ಆದೇಶದಲ್ಲಿ ನೀಡಿರುವ ಮಾರ್ಗಸೂಚಿಯನ್ವಯ ಈ ಹಿಂದೆ ಮೀಸಲಾತಿ ಆಧಾರದ ಮೇಲೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ನೀಡಿದ ಬಡ್ತಿಗಳನ್ನು ಪುನರ್ ಪರಿಶೀಲಿಸಿ, ಪತ್ರಾಂಕಿತ ವ್ಯವಸ್ಥಾಪಕರ ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಿ ಉಲ್ಲೇಖ(3)ರ ಅಧಿಕೃತ ಜ್ಞಾಪನದೊಂದಿಗೆ ಅಂತಿಮ ಜೇಷ್ಠತಾ ಪಟ್ಟಿಯನ್ನು ಹೊರಡಿಸಲಾಗಿರುತ್ತದೆ.

ಉಲೇಖ (4) ಮತ್ತು (5)ರ ಸರ್ಕಾರದ ಸುತ್ತೋಲೆಗಳಲ್ಲಿ ಘನ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಿಸುವ ಸಂಬಂಧ ತತ್ಪರಿಣಾಮ ಕ್ರಮವಾದ ಮುಂಬಡ್ತಿ ಮತ್ತು ಹಿಂಬಡ್ತಿ ಗಳೆರಡನ್ನು ಪೂರ್ಣಗೊಳಿಸಲು ನಿರ್ದೇಶನವಿರುತ್ತದೆ ಆದ್ದರಿಂದ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿಯನುಸಾರ ಪತ್ರಾಂಕಿತ ವ್ಯವಸ್ಥಾಪಕರ ವೃಂದದಲ್ಲಿ ಅರ್ಹತಾ ದಿನಾಂಕ ಲಭ್ಯವಾಗದೆ ಇರುವ ಪತ್ರಾಂಕಿತ ವ್ಯವಸ್ಥಾಪಕರಿಗೆ ಅಧೀಕ್ಷಕರ ಹುದ್ದೆಗೆ ಹಿಂಬಡ್ತಿ ಆದೇಶವನ್ನು ಈ ಕೆಳಕಂಡಂತೆ ಹೊರಡಿಸಲಾಗಿದೆ.

**ಕಚೇರಿ ಆದೇಶ ಸಂಖ್ಯೆ: ಆಡಳಿತ–1/ 53 /2018–19**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಘನ ಸರ್ವೋಚ್ಚ ನ್ಯಾಯಾಲಯದ ಆದೇಶ ಮತ್ತು ಸರ್ಕಾರದ ಸುತ್ತೋಲೆಗಳಲ್ಲಿನ ಸೂಚನೆ/ನಿರ್ದೇಶನದಂತೆ ಪರಿಶೀಲಿಸಲಾಗಿ ಉಲ್ಲೇಖ(3)ರಲ್ಲಿ ಪ್ರಕಟಿಸಲಾಗಿರುವ ಅಂತಿಮ ಜೇಷ್ಠತಾ ಪಟ್ಟಿಯಂತೆ ಅಧೀಕ್ಷಕರ ಹುದ್ದೆಯಿಂದ ಪತ್ರಾಂಕಿತ ವ್ಯವಸ್ಥಾಪಕರ ಹುದ್ದೆಗೆ ವಾಸ್ತವಿಕವಾಗಿ ಬಡ್ತಿ ಹೊಂದಿರುವ ಈ ಕೆಳಕಂಡ ಅಧಿಕಾರಿಯವರನ್ನು ಪತ್ರಾಂಕಿತ ವ್ಯವಸ್ಥಾಪಕರ ವೃಂದದಲ್ಲಿ ಅರ್ಹತಾ ದಿನಾಂಕ ಲಭಿಸದೇ ಇರುವುದರಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ತತ್ಪರಿಣಾಮದ ಕ್ರಮವಾಗಿ ಹಾಗೂ ಕರ್ನಾಟಕ ನಾಗರಿಕ ಸೇವಾ (ಬಡ್ತಿ, ವೇತನ, ಮತ್ತು ನಿವೃತ್ತಿ ವೇತನ ವಿನಿಯಮ) ಅಧಿನಿಯಮ 1973ರ ಸೆಕ್ಷನ್(5) ಮತ್ತು ಅದರ ಉಪ ಸೆಕ್ಷನ್‌ಗಳನ್ವಯ ಈ ಅಧಿಕಾರಿಯವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಧೀಕ್ಷಕರ ಹುದ್ದೆಗೆ ಹಿಂಬಡ್ತಿಗೊಳಿಸಿ ಆದೇಶಿಸಲಾಗಿದೆ.

| ಕ್ರ.ಸ | ಅಧಿಕಾರಿಗಳ ಹೆಸರು ಹಾಗು ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ | ಪ್ರಸ್ತುತ ನಿರ್ವಹಿಸುತ್ತಿರುವ ಹುದ್ದೆ ಮತ್ತು ವೇತನ ಶ್ರೇಣಿ | ಹಿಂಬಡ್ತಿಗೊಳಿಸಲಾದ ಹುದ್ದೆ ಮತ್ತು ಸ್ಥಳನಿಯುಕ್ತಿಗೊಳಿಸಿದ ಕಚೇರಿ ಮತ್ತು ಸ್ಥಳ | ಹಿಂಬಡ್ತಿಗೊಳಿಸಿದ ಹುದ್ದೆಯ ವೇತನ ಶ್ರೇಣಿ |
|---|---|---|---|---|
| 1 | ಎಸ್.ಚಿಕ್ಕಬ್ಬಯ್ಯ<br>ಪತ್ರಾಂಕಿತ ವ್ಯವಸ್ಥಾಪಕರು(ಲೆಕ್ಕ)<br>ಕೇಂದ್ರ ಕಛೇರಿ, ಆಸಾಂನಿ, ಬೆಂಗಳೂರು | ಪತ್ರಾಂಕಿತ ವ್ಯವಸ್ಥಾಪಕರು<br>ರೂ. 22800–43200 | ಅಧೀಕ್ಷಕರು<br>ರೂ. 20000–36300 | ರೂ. 20000–36300<br>ಅಧೀಕ್ಷಕರು,<br>ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು |

ಸಂಬಂಧಪಟ್ಟ ಅಧಿಕಾರಿಯವರನ್ನು ಕೂಡಲೇ ಕಾರ್ಯವಿಮುಕ್ತಿಗೊಳಿಸಿ ಸ್ಥಳನಿಯುಕ್ತಿಗೊಳಿಸಲಾಗಿರುವ ಕಚೇರಿಯಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ ಹಾಗೂ ಚುನಾವಣಾ ಕಾರ್ಯದಲ್ಲಿ ನಿಯೋಜಿತರಾಗಿರುವ ನೌಕರರುಗಳನ್ನು ಉಲ್ಲೇಖ(7)ರನ್ವಯ ಚುನಾವಣಾ ಕಾರ್ಯ ಮುಗಿದ ನಂತರ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿಯಿಂದ ಬಿಡುಗಡೆಗೊಂಡು ಹಿಂಬಡ್ತಿ ಸ್ಥಳ ನಿಯುಕ್ತಿಗೊಳಿಸಲಾದ ಕಛೇರಿಯಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಿದೆ.

(ಡಾ. ಸಿ.ಹೆಚ್. ವಸುಂಧರಾ ದೇವಿ)
ನಿರ್ದೇಶಕರು (ಪ್ರ).

ಪ್ರತಿಯನ್ನು:

1. ಮಾನ್ಯ ಯೋಜನಾ ಸಚಿವರು, ವಿಧಾನಸೌಧ, ಬೆಂಗಳೂರು ಇವರ ಅವಗಾಹನೆಗೆ ಸಲ್ಲಿಸಿದೆ.
2. ಸರ್ಕಾರದ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
4. ನಿರ್ದೇಶಕರು, ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ, 4ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು.
6. ಪತ್ರಾಂಕಿತ ವ್ಯವಸ್ಥಾಪಕರು, ಕೇಂದ್ರ ಕಛೇರಿ, ಆಸಾಂನಿ, ಬೆಂಗಳೂರು
7. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ನಿರ್ದೇಶಕರ ಆಪ್ತ ಶಾಖೆಗೆ.
9. ಸಂಬಂಧಿಸಿದ ಅಧಿಕಾರಿಗಳಿಗೆ.
10. ಕಛೇರಿ ಆದೇಶದ ಕಡತಕ್ಕೆ.